

ತಿರುಪತಿ ಭಂಗಿ
ಕಲೆ: ಮುರಳೀಧರ್ ರಾಥೋಡ್



# ಕಾಡುಕಲ್ಲಿಗೆ ಮೂರು ಮೊಲೆ

ಸೂರ್ಯ ಏಳುವ ಮೊದಲೆದ್ದು ಪದ್ದಕ್ಕ ಮನ್ಯಾಗಿನ ಕಸಾಮುಸುರಿ ಮಾಡಿ, ಎಮ್ಮಿ ಹಾಲ ಹಿಂಡ್ಕೊಂಡ, ಗಡಿಗ್ಯಾಗ ಹಾಕಿ ಹಾಲ ಒಲಿಮ್ಯಾಲ ಕಾಸಾಕ ಇಟ್ಟು, 'ಸರಕ್ ಬರಕ್' ಅಂತ ಮಜ್ಜಗಿ ಕಡದು, ಬೆಣ್ಣಿ ತಗದು ಒಂದ ಸಣ್ಣ ಮಡಕ್ಯಾಗ ಹಾಕಿ ಇಟ್ಳು. ಸಾಕಿದ ಬೆಕ್ಕಿನ ಮರಿಯೊಂದ 'ಮೆಂವ್ ಮೆಂವ್' ಅಂತ ಅಕಿ ಕಾಲಾಗ ಸುತ್ತಾಡೂದ ಕಂಡ ಅದಕ್ಕೊಂದಿಷ್ಟ ತಾಜಾ ಮಜ್ಜಗಿ ಒಂದ ಪ್ಲೇಟನ್ಯಾಗ ಹಾಕಿದ್ಳು. ಅದು ಕಣ್ಣಮುಚ್ಚಿ ಮಜ್ಜಗಿ ಕುಡಿಯಾಕತ್ತಿತು.

'ಏ ಪದ್ದಕ್ಕ ಎಮ್ಮಿ ಕರಾ ಕಟ್ಟಿಲ್ಲೇನು, ಅದು ಚೆಲ್ಲಾಟಕ ಬಿದ್ಯೆತಿ ನೋಡss...', 'ಶಿವನೇ ದೇವ್ರ' ಅನಕೋತ ಆಗತಾನೇ ಹಾಸಗ್ಯಾಗಿಂದ ಎದ್ದ ಕಣ್ಣ ಉಜ್ಜಕೋತ ದುಂಡಜ್ಜಿ ಒಳಗಿದ್ದ ತನ್ನ ಮೊಮ್ಮಗಳಿಗೆ ದನಿ ಮಾಡಿದಾಗ, ಪದ್ದಕ್ಕ ಗಡಗ್ನ ಕೈಯಾಗಿದ್ದ ಕೆಲಸಾ ಬಿಟ್ಟ ಚೆಲ್ಲಾಟಕ ಬಿದ್ದ ಕರುವಿನ ಕಡೆ ಓಡಿಬಂದು, ಅದನ್ನ ರಮಿಸಿ, ಕೈಯಾಗ ಒಂದ ತಟಗ ಹಸಿಮೇವು ಹಿಡಕೊಂಡ ಆಸೆ ತೋರಿಸಿ, ಹಿಡ್ಕೊಂಡ ಕೊಳ್ಳಿಗೆ ಕಣ್ಣಿಹಚ್ಚಿ ಅದರ ಕುಂಡಿಗೊಂದು ಇಕ್ಕರ್ಸಿದ್ಳು.

'ಯವ್ವಾ ಒಂದ ತಟಗ ಚಾ ಇದ್ದರ ಕೊಡು' ದುಂಡಜ್ಜಿ ಕೇಳಿದ್ಳು.

'ಮೋತಿ ತೊಳಿಲಾರ್ದ ನಾ ನಿನಗ ಚಾ ಕೊಡಂಗಿಲ್ಲ'

'ಅದಕೇನಕೈತಿ ಕೊಡವ್ವಾ'

'ಸಣ್ಣ ಹುಡುಗರಗತೆ ಹಟಾ ಮಾಡಬ್ಯಾಡ, ಬಿಸಿನೀರ ಕಾಸಿನಿ ಮೋತಿ, ಬಾಯಿ ತೊಳಕೊಂಡ ಕುಡಿ'

ಬ್ಯಾಸರಿಕಿಲೇ ದುಂಡಜ್ಜಿ ಮ್ಯಾಲೆದ್ದು ನೀರ ಮುಕ್ಕಳಸಿ, ಗಲಗಲಾ ಮಾಡಿ ಉಗಳಿ, ಮೋತಿ ಕೈಯಾಡಿಸಿಕೊಂಡು, ತನ್ನ ಸೀರಿ ಸೆರಗಿಂದ ಮೋತಿ ವರಸಕೊಂಡ್ಳು. ಪದ್ದಕ್ಕ ಬಿಸಿ ಬಿಸಿ ಚಾ ಮಾಡ್ಕೊಂಡ ತಂದು ದುಂಡಜ್ಜಿ ಕೈಗಿಟ್ಳು. ಆಗ ಕುಡಕೋತ ದುಂಡಜ್ಜಿ ನೀನೂ ತಟಗ ಕುಡಿ ಅಂತ ಮೊಮ್ಮಗಳಿಗೆ ಹೇಳಿದ್ಳು. 'ಇಂದ ಆಯಿತಾರ ನಾನು ಒಪ್ಪತ್ತ ಅದಿನಿ, ಜಳಕಾ ಪೂಜಿ ಮಾಡಿನೇ ಕುಡಿತಿನಿ' ಅಂದ್ಳು. 'ಆ ಹಾಳಾದ ದೇವ್ರ ನಿನಗೇನ ಚಲೋ ಮಾಡ್ಯಾನಂತ ಒಪ್ಪತ್ತ ಇರ್ತಿ..! ಉಂಡ ತಿಂದ ಕೆಲಸ ಮಾಡ್ಕೊಂಡ ಆರೋಗ್ಯಾ ನೋಡ್ಕೊರವ್ವಾ... ಈ ಒಪ್ಪತ್ತಾ ವನವಾಸಾ ನಿನಗ್ಯಾಕ ಬೇಕಾಗೇತಿ, ನಾಂವ ಎಷ್ಟ ದೇವ್ರಿಗೆ ಶರಣ ಅಕ್ಕಿವ್ರೋ ಅಂವ ಅಷ್ಟ ನಮಗ ಕಷ್ಟಾ ಹೇರ್ತಾನ, ನಮನ್ನ ಒಂದ ಲೆಕ್ಕದಾಗ ಕತ್ತಿ ಗತೇನ ತಿಳಕೊತಾನ, ನಾನೂ ಎಲ್ಲಾ ಮಾಡಿ ನೋಡಿದ್ಯಾ, ಏನೇನೂ ಫಲ ಇಲ್ಲ' ದುಂಡಜ್ಜಿ ಚಾ ಕುಡಕೋತ ಮನದಾಗ ಮೂಡಿದ ಮಾತು ಮೊಮ್ಮಗಳ ಕಿವಿಯಾಗ ಸುರದ್ಳು.